ಭಾರಿ ನೀರಾವರಿ ಯೋಜನೆಗೆ ಒಳಪಡುವ ಜಮೀನು

218 (353)

ಶ್ರೀ. ಗಂಗಾಧರ ನಾಯಕ (ಮಾನ್ವಿ) :ಮಾನ್ಯ ಭಾರೀ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) ದೊಡ್ಡ ನೀರಾವರಿ ಯೋಜನೆಗಳಿಂದ ನೀರನ್ನು ಪಡೆಯಲು ಅವಕಾಶವಿರುವ ಜಮೀನು ಎಷ್ಟು? ಅಂತಹ ಪ್ರದೇಶಕ್ಕೆ ದೊಡ್ಡ ನೀರಾವರಿ ಯೋಜನೆಗಳಿಂದ ನೀರನ್ನು ಒದಗಿಸಲಾಗಿದೆಯೇ;

(ಆ) ಈ ನೀರಾವರಿ ಯೋಜನೆಗಳಿಂದ ಉಪಯೋಗ ಪಡೆಯುತ್ತಿರುವ ಸಣ್ಣ, ಅತಿಸಣ್ಣ, ಮಧ್ಯಮ ಮತ್ತು ದೊಡ್ಡ ಹಿಡುವಳಿದಾರರ ಸಂಖ್ಯೆ ಎಷ್ಟು? (ವಿವರ ನೀಡುವುದು)

ಶ್ರೀ ಕೆ.ಎನ್. ನಾಗೇಗೌಡ (ಭಾರಿ ನೀರಾವರಿ ಸಚಿವರು)

(ಅ) ರಾಜ್ಯದಲ್ಲಿ ಭಾರಿ ನೀರಾವರಿ ಯೋಜನೆಗಳಿಂದ ಒಟ್ಟು 27.10 ಲಕ್ಷ ಹೆಕ್ಟೇರ್ ಭೂ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸಬಹುದಾಗಿದ್ದು, ಈ ಪೈಕಿ 1.4.1996 ರಂದು ಇದ್ದಂತೆ, ಒಟ್ಟು 14.72 ಲಕ್ಷ ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸಲಾಗಿದೆ.

(ಆ) ಈ ರೀತಿಯ ಅಂಕಿ ಅಂಶಗಳು ನೀರಾವರಿ ಇಲಾಖೆಯಲ್ಲಿ ಲಭ್ಯವಿರುವುದಿಲ್ಲ.

ರಾಜ್ಯದಲ್ಲಿರುವ ವಿದ್ಯುತ್ ಪ್ರಮಾಣ

219: (357)

ಶ್ರೀ. ಗಂಗಾಧರ ನಾಯಕ್(ಮಾನ್ವಿ): ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) ರಾಜ್ಯದಿಂದ, ಹೊರ ರಾಜ್ಯದಿಂದ ಹಾಗೂ ಕೇಂದ್ರದಿಂದ ಪಡೆಯುವ ವಿದ್ಯುತ್‌ನಲ್ಲಿ ಕೃಷಿ, ಕೈಗಾರಿಕೆ ಹಾಗೂ ಗೃಹ ಬಳಕೆಗೆ ಸರಬರಾಜು ಆಗುತ್ತಿರುವ ಪ್ರಮಾಣ ಎಷ್ಟು;

(ಆ) ಇದರಲ್ಲಿ ಕಳ್ಳತನ, ನಷ್ಟವಾಗುತ್ತಿರುವ ವಿದ್ಯುತ್ ಎಷ್ಟು; (ತಾಲ್ಲೂಕುವಾರು ವಿವರ ನೀಡುವುದು)

(ಇ) ಇದನ್ನು ತಡೆಗಟ್ಟಲು ಸರ್ಕಾರದವರು ಕೈ ಗೊಂಡಿರುವ ಕ್ರಮಗಳೇನು?

ಶ್ರೀ. ಶರಣ ಬಸಪ್ಪ ದರ್ಶನಾಪುರ (ಇಂಧನ ರಾಜ್ಯ ಸಚಿವರು)

(ಅ) 1995-96ರ ಸಾಲಿಗೆ ಸಂಬಂಧಿಸಿದಂತೆ ವಿವರಗಳು ಕೆಳಕಂಡಂತಿದೆ.

1) ಕೃಷಿ-7363 ದಶಲಕ್ಷ ಯೂನಿಟ್‌ಗಳು.
2) ಕೈಗಾರಿಕೆ-5092 ದಶಲಕ್ಷ ಯೂನಿಟ್‌ಗಳು.
3) ಗೃಹ ಬಳಕೆ-2654 ದಶಲಕ್ಷ ಯೂನಿಟ್‌ಗಳು.

(ಆ) 1995-96ರ ಸಾಲಿನಲ್ಲಿ ಪ್ರಸರಣೆ ಮತ್ತು ವಿವರಣೆಯಲ್ಲಿ ನಷ್ಟಗೊಂಡ ವಿದ್ಯುತ್‌ನ ಪ್ರಮಾಣ 3628 ದಶಲಕ್ಷ ಯೂನಿಟ್‌ಗಳೆಂದು ಲೆಕ್ಕಾಚಾರ ಮಾಡಿದೆ. ಇದರಲ್ಲಿ ವಿದ್ಯುತ್ ಕಳ್ಳತನವೂ ಸೇರಿದೆ.

ಈ ಲೆಕ್ಕಾಚಾರವನ್ನು ಇಡೀ ವಿದ್ಯುತ್ ವ್ಯವಸ್ಥೆಯನ್ನು ಸಮಗ್ರವಾಗಿ ಪರಿಗಣಿಸಿ ಮಾಡಲಾಗುತ್ತಿದೆ. ತಾಲ್ಲೂಕನ್ನು ಆಧಾರವನ್ನಾಗಿಟ್ಟು ಕೊಂಡು ಮಾಡುತ್ತಿಲ್ಲ.

(ಇ) ವಿದ್ಯುತ್ ಪ್ರಸರಣೆ ಮತ್ತು ವಿತರಣೆಯಲ್ಲಿನ ನಷ್ಟವನ್ನು ಕಡಿಮೆ ಗೊಳಿಸಲು ಮಂಡಳಿಯು ಕೆಳಕಂಡ ಕ್ರಮಗಳನ್ನು ಪ್ರತೀ ವರ್ಷವೂ ಕೈಗೊಳ್ಳುತ್ತಿದೆ.

(ಅ) ಹೊಸವಿದ್ಯುತ್ ಪ್ರಸರಣಾ ಮಾರ್ಗಗಳು ಮತ್ತು ವಿದ್ಯುತ್ ಸ್ಟೇಷನ್‌ಗಳ ನಿರ್ಮಾಣ.

ಆ) ಹಾಲಿ ಇರುವ ವಿದ್ಯುತ್ ಉಪ ಕೇಂದ್ರಗಳಲ್ಲಿ ಕೆಪಾಸಿಟರ್ ಬ್ಯಾಂಕುಗಳ ಅಳವಡಿಕೆ.

ಇ) 11 ಕೆವಿ ವಿದ್ಯುತ್ ಫೀಡರುಗಳಿಗೆ ಕೆಪಾಸಿಟರ್ ಬ್ಯಾಂಕುಗಳನ್ನು ಅಳವಡಿಸುವುದು.

ಈ) ಹೊಸ 11 ಕೆವಿ ಎಕ್ಸ್‌ಪ್ರೆಸ್ ಫೀಡರುಗಳ ನಿರ್ಮಾಣ.

ಉ) ವಿದ್ಯುತ್ ವಿತರಣಾ ವ್ಯವಸ್ಥೆಯಲ್ಲಿ ಕಡಿಮೆ ಗಾತ್ರದ ವಿದ್ಯುತ್ ವಾಹಕಗಳನ್ನು ಹೆಚ್ಚಿನ ಗಾತ್ರದ ವಿದ್ಯುತ್ ವಾಹಕಗಳ ಮೂಲಕ ಬದಲಿಸುವುದು.

ಊ) ವಿತರಣಾ ಜಾಲದಲ್ಲಿ ಹೆಚ್ಚುವರಿ ವಿತರಣಾ ಟ್ರಾನ್ಸ್‌ಫಾರ್ಮ್‌ರ್‌ಗಳನ್ನು ಸ್ಥಾಪಿಸುವುದು.

ಉಳ್ಳಾಲ ಕ್ಷೇತ್ರದ ನೇತ್ರಾವತಿ ನದಿಯ ಎಡದಂಡೆ ಕಾಲುವೆ ಪ್ರದೇಶದಲ್ಲಿ ರಸ್ತೆ ಅಭಿವೃದ್ಧಿ

220 (245)

ಶ್ರೀ.ಕೆ. ಜಯರಾಮ ಶೆಟ್ಟಿ.(ಉಳ್ಳಾಲ): ಮಾನ್ಯ ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) ಉಳ್ಳಾಲ ವಿಧಾನಸಭಾ ಕ್ಷೇತ್ರದ ನೇತ್ರಾವತಿ ನದಿಯ ಎಡದಂಡೆಯ ಪ್ರದೇಶದಲ್ಲಿ ನಾಲ್ಕು ಗ್ರಾಮಗಳನ್ನು ಹಾದು ಹೋಗುವ ಬೆಳ್ಮತೋಡು ಕಳೆದ 30 ವರುಷಗಳಿಂದ ನಾಡು ರಸ್ತೆಯಾಗಿ ರೈತರಿಗೆ ತೊಂದರೆಯಾಗಿರುವ ವಿಚಾರವು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಈ ಕಾಮಗಾರಿಯ ದುರಸ್ತಿಯನ್ನು ಸರಕಾರವು ಯಾವಾಗ ಕೈಗೆತ್ತಿಕೊಳ್ಳುವುದು;

(ಇ) ಈ ಕಾಮಗಾರಿಗೆ ತಗಲುವ ವೆಚ್ಚವೆಷ್ಟು; ಮತ್ತು ಯಾವಾಗ ಪೂರ್ಣಗೊಳಿಸಲಾಗುವುದು?

ಶ್ರೀ. ತಿಪ್ಪೇಸ್ವಾಮಿ (ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು.)

(ಅ) ಬಂದಿದೆ.

(ಆ) ಕೃಷ್ಣರಾಜ ಸಾಗರದ ಎಂಜಿನಿಯರಿಂಗ್ ಸಂಶೋಧನಾ ಕೇಂದ್ರದಿಂದ ಈ ಯೋಜನೆಯ ಮಾದರಿ ಅಧ್ಯಯನವಾದ ನಂತರ ಕಾಮಗಾರಿಯನ್ನು ಕೈಗೆತ್ತಿ ಕೊಳ್ಳಲಾಗುವುದು.

(ಇ) 82.15 ಲಕ್ಷ ಅಂದಾಜು ಪಟ್ಟಿಗೆ ಆಡಳಿತಾತ್ಮಕ ಅನುಮೋದನೆನೀಡಿದ ನಂತರ ಹಾಗೂ ಕರ್ನಾಟಕ ಎಂಜಿನೀಯರಿಂಗ್ ಸಂಶೋಧನಾ ಕೇಂದ್ರದ ಮಾದರಿ ಅಧ್ಯಾಯನದ ನಂತರ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗುವುದು.